ಮೂರು ವರ್ಷ ಕಾಲುವೆಯನ್ನು ಬಂದ್ ಮಾಡಿದರೆ ಬೆಳೆ ಆಗುವುದನ್ನು ನಿಲ್ಲಿಸಿದಂತಾಗುತ್ತದೆ. ನಮಗೆ ಗೊತ್ತಿರುವ ಹಾಗೆ ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿ ಎರಡು ಸಕ್ಕರೆ ಕಾರ್ಖಾನೆಗಳು ಇವೆ. ಆ ಫ್ಯಾಕ್ಟರಿಗೆ ಕಬ್ಬು ಇಲ್ಲದೆ ಇದ್ದರೆ ಅವುಗಳು ಮುಚ್ಚುವ ಪರಿಸ್ಥಿತಿ ಒದಗಿ ಬಂದಿದೆ. ಆದ್ದರಿಂದ ಜೀರೋ ಮೈಲಿಯಿಂದ 38ನೆಯ ಮೈಲಿಯವರೆಗೆ ಕಾಲುವೆಯು ಸ್ವಲ್ಪ ಕಡೆ ಒಡೆದಿದೆ, ಅಂದರೆ ಈ ಕಾಲುವೆಯನ್ನು ದುರಸ್ತಿ ಮಾಡುವುದು ಸ್ವಲ್ಪ ಸುಲಭವಾಗಬಹುದು. ಮೊದಲನೇ ವರ್ಷದಲ್ಲಿ ಜೀರೋ ಮೈಲಿಯಿಂದ 38 ಮೈಲಿಯವರೆಗೆ ರಿಪೇರಿ ಕೆಲಸವನ್ನು ಪೂರ್ಣಮಾಡಿ, ಆ ಮೇಲೆ ಮಧ್ಯ ಭಾಗ ಮಾಡಬಹುದು. ಈ ತರಹ ಮಾಡದಿದ್ದರೆ, ಸಕ್ಕರೆ ಕಾರ್ಖಾನೆಯನ್ನು ಮುಚ್ಚುತಕ್ಕ ಪರಿಸ್ಥಿತಿ ಇರುವುದರಿಂದ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ. ಒಂದು ವರ್ಷದಲ್ಲಿ ಇದನ್ನು ಪೂರ್ಣ ಮಾಡಬೇಕು ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ವಿಷಯದಲ್ಲಿ ಚುನಾಯಿತ ಪ್ರತಿನಿಧಿಗಳನ್ನು, ರೈತ ಸಂಘದ ಪ್ರತಿನಿಧಿಗಳನ್ನು, ಹಾಗೂ ಶುಗರ್ ಫ್ಯಾಕ್ಟರಿ ಪ್ರತಿನಿಧಿಗಳನ್ನು ಎಲ್ಲರನ್ನೂ ಕರೆಯಿಸಿ ತೀರ್ಮಾನ ಮಾಡಿದ್ದೇವೆ. 70 ದಿವಸ ನೀರನ್ನು ನಿಲುಗಡೆ ಮಾಡಿ, ಈ ಕೆಲಸವನ್ನು ಮಾಡುವುದು ಅವಶ್ಯಕ. ಈ ತೀರ್ಮಾನ ಮಾಡಿದರೆ ಇಟ್ಟಿರತಕ್ಕ ಕಬ್ಬು ಬೆಳೆ ನಾಶವಾಗುತ್ತದೆಂದು, ಜೀರೋ ಮೈಲಿಯಿಂದ 36 ಮೈಲಿಗಳವರೆಗೆ 21 ದಿವಸಗಳ ಕಾಲ, ಕಾಲುವೆಯನ್ನು ಮುಚ್ಚಿಸಿ, ಇರತಕ್ಕ ಬೆಳೆಯನ್ನು ಉಳಿಸಿಕೊಳ್ಳುವುದು ಎಂದು ಮಾಡಿದ್ದೇವೆ. ಆ ತಕ್ಕೋಸ್ಕರ ಸಕ್ಕರೆ ಕಾರ್ಖಾನೆಯ ಪ್ರತಿನಿಧಿಗಳನ್ನು ಕರೆಯಿಸಿ, ಅವರ ಒಪ್ಪಿಗೆಯನ್ನು ಪಡೆದಿದ್ದೇವೆ. 1985—86ರಲ್ಲಿ ಜೀರೋ ಮೈಲಿಯಿಂದ 36ನೇ ಮೈಲಿಯವರೆಗೆ ಇರುವ ವರ್ಕನ್ನು ಸುಮಾರು 30 ಕೋಟ ರೂಪಾಯಿಗಳ ವೆಚ್ಚದಲ್ಲಿ ದುರಸ್ತಿ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ.

ವಿಷಯ : ಹಗರಿ ಬೊಮ್ಮನಹಳ್ಳಿ ಏತ ನೀರಾವರಿ ಯೋಜನೆ.

ಪ್ರಶ್ನೆ : 189 (338) ಶ್ರೀ ಕೆ. ಚೆನ್ನಬಸವನ ಗೌಡ (ಕೂಡ್ಲಿಗಿ) —ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಬಳ್ಳಾರಿ ಜಿಲ್ಲೆ ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 10—12 ಏತ ನೀರಾವರಿ ಯೋಜನೆಗಳು ಕೆಲಸ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಏತ ನೀರಾವರಿಯ ಮೋಟಾರು ಸುಟ್ಟರೆ ಅದನ್ನು ದುರಸ್ತಿ ಮಾಡಲು ಒಂದು ತಿಂಗಳು ಹಿಡಿಯುವುದರಿಂದ ಆಷ್ಟರಲ್ಲಿ ರೈತರು ಬೆಳೆದ ಬೆಳೆಗಳು ಸಂಪೂರ್ಣ ನಾಶವಾಗುವುದೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಹಾಗಿದ್ದಲ್ಲಿ ಮೇಲಿನ ತೊಂದರೆಯನ್ನು ನಿವಾರಿಸಲು ಅಲ್ಲಲ್ಲಿ ಸ್ಟ್ಯಾಂಡ್ ಬೈ ಮೋಟಾರು ಇರುವ ವ್ಯವಸ್ಥೆಯನ್ನು ಮಾಡುವಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಉತ್ತರ : ಶ್ರೀ **ಆರ್. ಎನ್. ಲಕ್ಷ್ಮೀಪತಿ**(ಸಣ್ಣ ನೀರಾವರಿ ಸಚಿವರು).—

ಅ) 13 ಏತ ನೀರಾವರಿ ಯೋಜನೆಗಳು ಕೆಲಸ ಮಾಡುತ್ತಿವೆ.

ಆ) ಸಾಮಾನ್ಯವಾಗಿ ನಿಗದಿಪಡಿಸಿರುವ ಅಶ್ವಶಕ್ತಿಗಳಿಗೆ ಅನುಗುಣವಾಗಿ ಎರಡು ಅಥವಾ ಅದಕ್ಕಿಂತಾ ಜಾಸ್ತಿಯ ಮೋಟಾರುಗಳನ್ನು ಅಳವಡಿಸಲಾಗಿದ್ದು, ಒಂದು ಮೋಟಾರು ಸುಟ್ಟರೆ ಉಳಿದ ಮೋಟಾರುಗಳಿಂದ ನೀರನ್ನು ಕೊಡಲಾಗುತ್ತಿದೆ. ಸುಟ್ಟ ಮೋಟಾರನ್ನು ಅತಿ ಶೀಘ್ರವಾಗಿ ದುರಸ್ತಿ ಮಾಡಿ ಕೂಡಲೆ ಪೂರ್ಣ ಪ್ರಮಾಣದ ನೀರನ್ನು ಒದಗಿಸಲಾಗುತ್ತಿದೆ.

ಇ) ಈಚಿನ ಯೋಜನೆಗಳಲ್ಲಿ ಸ್ಟ್ಯಾಂಡ್ ಬೈ (stand by) ಮೋಟಾರು ಹಾಕುವ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಕೆ. ಚೆನ್ನಬಸವನ ಗೌಡ.—ಸ್ವಾಮಿ, ಈಗ ಸುಮಾರು ಹತ್ತಾರು ವರ್ಷಗಳಿಂದ ಹಡಗಲಿ ತಾಲ್ಲೂಕಿನಲ್ಲಿ ಹತ್ತು ಮೋಟಾರುಗಳು ಸುಟ್ಟು ಹೋಗಿವೆ. ಈ ಮೋಟಾರುಗಳನ್ನು ರಿಪೇರಿ ಮಾಡದಿದ್ದುದರಿಂದ ರೈತರ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಸ್ಟ್ಯಾಂಡ್ ಬೈ ಮೋಟಾರನ್ನು ಒಂದೊಂದು ತಾಲ್ಲೂಕಿನಲ್ಲೂ ಒಂದೊಂದು ಕಡೆ ಅಳವಡಿಸಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 13 ಏತ ನೀರಾವರಿ ಯೋಜನೆಗಳಿವೆ ಇವುಗಳಿಗೆ ಸ್ಟ್ಯಾಂಡ್ ಬೈ ಮೋಟಾರ್ ಇಟ್ಟರೆ ರೈತರಿಗೆ ಅನುಕೂಲವಾಗುತ್ತದೆ, ಇಲ್ಲದೇ ಹೋದರೆ ರೈತರ ಬೆಳೆ ನಾಶವಾಗುತ್ತದೆ. ನಾಶವಾದ ಬೆಳೆಗೆ ಸರ್ಕಾರದವರು ಕಾಂಪನ್‌ಸೇಷನ್ ಕೊಡುತ್ತಿಲ್ಲ, ಮತ್ತು ಸರ್ಕಾರದವರು ರೈತರಿಂದ ನೀರಿನ ತೆರಿಗೆಯನ್ನೂ ಸಹ ವಸೂಲು ಮಾಡುತ್ತಿದ್ದಾರೆ. ಇವೆಲ್ಲಾ ತೊಂದರೆಗಳು ಇರುತ್ತವೆ. ಆದುದರಿಂದ ತಾವು ನಮ್ಮ ಭಾಗದಲ್ಲಿ ಸ್ಟ್ಯಾಂಡ್ ಬೈ ಮೋಟಾರ್ ಹಾಕುವ ವ್ಯವಸ್ಥೆ ಮಾಡಲು ತಕ್ಷಣ ಒಪ್ಪಿಗೆ ಕೊಡುತ್ತಿರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ —ಪ್ರತಿಯೊಂದು ಏತ ನೀರಾವರಿಗೂ ಹಂತ ಹಂತವಾಗಿ ಸ್ಟ್ಯಾಂಡ್ ಬೈ ಮೋಟಾರ್ ಹಾಕುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಒಂದು ಮೋಟಾರ್ ಸುಟ್ಟು ಹೋದರೆ, ಮತ್ತೊಂದು ಮೋಟಾರನ್ನು ಅಲ್ಲಿಯೇ ಅಳವಡಿಸಲಾಗಿದೆ. ಈ ವರ್ಷದಲ್ಲಿ ಹಣಕಾಸಿನ

ಪರಿಸ್ಥಿತಿಯನ್ನು ನೋಡಿಕೊಂಡು, ಒಂದೊಂದು ಸ್ಟ್ಯಾಂಡ್ ಬೈ ಮೋಟಾರ್ ಇಡಬೇಕೆಂಬುದು ಸರ್ಕಾರದ ಪಾಲಿಸಿಯಾಗಿದೆ.

ಶ್ರೀ ಕೆ. ಚೆನ್ನಬಸವನ ಗೌಡ — ಮೋಟಾರ್ ಸುಟ್ಟು ಹೋದರೆ, ರಿಪೇರಿ ಮಾಡುವುದಕ್ಕೆ ಮೆಕ್ಯಾನಿಕ್ ಇಲ್ಲ, ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳಿಗೆ ಸೇರಿ ಒಬ್ಬ ಮೆಕ್ಯಾನಿಕ್ಕನ್ನು ಇಟ್ಟಿದಾರೆ. ಅವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ರಿಪೇರಿ ಮಾಡುವುದಕ್ಕೆ ಹತ್ತಾರು ದಿವಸಗಳು ಬೇಕಾಗುತ್ತದೆ, ಆದುದರಿಂದ ಬಳ್ಳಾರಿ ಜಿಲ್ಲೆಗೆ ಒಬ್ಬ ಮೆಕ್ಯಾನಿಕನನ್ನು ನೇಮಕ ಮಾಡುತ್ತೀರಾ ?

ವಿಷಯ : ರಾಷ್ಟ್ರೀಯ ಹೆದ್ದಾರಿ ಮತ್ತು ಪ್ರಾಂತೀಯ ಹೆದ್ದಾರಿಗಳ ಪಕ್ಕದಲ್ಲಿರುವ ಸಾಲು ಮರಗಳ ಸಂರಕ್ಷಣೆಯ ಬಗ್ಗೆ.

ಪ್ರಶ್ನೆ : 190(688) ಶ್ರೀ ಜಿ ವಿ. ಮಂಟೂರ್ (ಬಾಗಲಕೋಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಷ್ಟ್ರೀಯ ಹೆದ್ದಾರಿ ಮತ್ತು ಪ್ರಾಂತೀಯ ಹೆದ್ದಾರಿಗಳ ಪಕ್ಕಕ್ಕೆ ಇರುವ ಗಿಡಗಳ ಸಂರಕ್ಷಣೆಯು ಯಾವ ಖಾತೆಗೆ ಸಂಬಂಧಿಸಿದ್ದು ;

ಆ) ಇಂತಹ ಗಿಡಗಳು ಪ್ರತಿನಿತ್ಯ ನಾಶವಾಗುತ್ತಿದ್ದು ಅರಣ್ಯ ಇಲಾಖೆಯವರು ಎಷ್ಟು ಮೊಕದ್ದಮೆಗಳನ್ನು ದಾಖಲು ಮಾಡಿ ಕ್ರಮ ಕೈಗೊಂಡಿದ್ದಾರೆ ;

ಇ) 1981–82, 1982–83 ಮತ್ತು 1984ನೇ ಸಾಲುಗಳಲ್ಲಿ ಹೆದ್ದಾರಿವಾರು ನೆಟ್ಟಿರುವ ಗಿಡಗಳ ಸಂಖ್ಯೆ ಎಷ್ಟು ? ಹಾಗೂ ಈ ಬಗ್ಗೆ ಖರ್ಚು ಮಾಡಿರುವ ಹಣ ಎಷ್ಟು ?

ಉತ್ತರ : ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿ ಗಳು).—

ಅ) ಕಾವಲುಗಾರಿ ಮತ್ತು ಅರಣ್ಯ ಇಲಾಖೆಗಳಿಗೆ ಸೇರಿದ್ದು.

ಆ) ಮೊಕದ್ದಮೆಗಳನ್ನು ದಾಖಲು ಮಾಡಿರುವುದಿಲ್ಲ.

ಇ) ನೆಟ್ಟ ಸಸಿಗಳ ವಿವರ ಹಾಗೂ ವೆಚ್ಚ ಈ ಕೆಳಗಿನಂತೆ ಇದೆ :

ವರ್ಷ	ಸಸಿಯ ಸಂಖ್ಯೆ	ವೆಚ್ಚ ರೂಪಾಯಿ
1981—82	24,000	250,000—00
1982—83	28,000	350,000—00
1983—84	90 000	1200,000—00

ಶ್ರೀ ಜಿ ವಿ. ಮಂಟೂರ್.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರತಕ್ಕ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಪ್ರಾಂತೀಯ ಹೆದ್ದಾರಿಗಳ ಪಕ್ಕದಲ್ಲಿ ಬೆಳಸಲಾಗುವ ಗಿಡಮರಗಳ ಸಂರಕ್ಷಣೆಯನ್ನು 11 ಜಿಲ್ಲೆಗಳಲ್ಲಿ ಅರಣ್ಯ ಇಲಾಖೆಯವರು, 8 ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆಯವರು ನೋಡಿಕೊಳ್ಳುತ್ತಿದ್ದಾರೆ. ಈ ತಾರತಮ್ಯ ಏತಕ್ಕೆಂದು ನಾನು ಕೇಳುತ್ತೇನೆ.

ಶ್ರೀ ಬಿ ಎ. ಜೀವಿಜಯ —ಇದುವರೆವಿಗೂ 2 ಇಲಾಖೆಗಳು ನೋಡಿಕೊಂಡು ಹೋಗುತ್ತಿವೆ.

ಶ್ರೀ ಜಿ. ವಿ. ಮಂಟೂರ್.— ಈ ತಾರತಮ್ಯ ಏತಕ್ಕೆಂದು ಕೇಳುತ್ತಿದ್ದೇನೆ

ಶ್ರೀ ಹೆಚ್. ಡಿ. ದೇವೇಗೌಡ — ರಾಷ್ಟ್ರೀಯ ಮತ್ತು ಪ್ರಾಂತೀಯ ಹೆದ್ದಾರಿಗಳ ಪಕ್ಕದಲ್ಲಿ ಬೆಳೆಸಲಾಗುವ ಮರಗಿಡಗಳ ಸಂಪೂರ್ಣ ಹೊಣೆಯನ್ನು ಅರಣ್ಯ ಇಲಾಖೆಗೆ ವಹಿಸಿಕೊಡುವ ಬಗ್ಗೆ, ಸರ್ಕಾರ ಅತ್ಯಂತ ಶೀಘ್ರವಾಗಿ ನಿರ್ಣಯ ಮಾಡುತ್ತದೆ.

ಶ್ರೀ ಅಪ್ಪಾಸ್ವಾಮಿ ರೆಡ್ಡಿ.— ರಸ್ತೆಗಳ ಪಕ್ಕದಲ್ಲಿರುವ ಸಾಲು ಮರಗಳ ಸಂರಕ್ಷಣೆಯ ಹೊಣೆಯನ್ನು ರೈತರಿಗೆ ಕೊಡುವುದಕ್ಕೆ ಇರತಕ್ಕ ಆಭ್ಯಂತರ ಏನು ?

ಶ್ರೀ ಬಿ ಎ. ಜೀವಿಜಯ — ಆಭ್ಯಂತರ ಏನೂ ಇಲ್ಲ, ಇದರ ಬಗ್ಗೆ ಸರ್ಕಾರ ಕೂಡಲೇ ನಿರ್ಧಾರ ತೆಗೆದುಕೊಳ್ಳುತ್ತದೆ.

ಶ್ರೀ ಸಿ. ಭೈರೇಗೌಡ.— ಸ್ವಾಮಿ, ಅರಣ್ಯ ಇಲಾಖೆಯವರು ಬೇಸಿಗೆ ಕಾಲದಲ್ಲಿ ನಾಟಿ ಮಾಡುತ್ತಿದ್ದಾರೆ. ಮಳೆಗಾಲದಲ್ಲಿ ಸಸಿ ನಾಟಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ? ಮರಗಿಡಗಳ ಸಂರಕ್ಷಣೆಯ ಹೊಣೆಯನ್ನು ಪಕ್ಕದಲ್ಲಿರತಕ್ಕ ಸಣ್ಣ ಹಿಡುವಳಿದಾರರಿಗೆ ಕೊಡುವಂಥ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.— ಮಾನ್ಯ ಅಧ್ಯಕ್ಷರೇ, ಪಕ್ಕದಲ್ಲಿರುವ ಜಮೀನು ಮಾಲೀಕರಿಗೆ ಪಟ್ಟಿ ಕೊಡತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ. ತಮಗೆ ಗೊತ್ತಿರುವ ಹಾಗೆ ಒಂದು ಅಥವಾ ಎರೆಡು ಕಿಲೋ ಮೀಟರ್‌ಗೆ ಒಬ್ಬನಂತೆ ವಾಚ್‌ಮ್ಯಾನ್ ಇಟ್ಟುಕೊಂಡು ಸಸಿಗಳನ್ನು ನಾಟಿ ಮಾಡಿಸಿ, ಅವುಗಳಿಗೆ ನೀರು ಹಾಕಿಸುವಂಥ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಹೆಚ್. ಜಿ. ಚೆನ್ನಪ್ಪ.— ಹೆದ್ದಾರಿಗಳ ಪಕ್ಕದಲ್ಲಿ ಮರಗಿಡಗಳನ್ನು ಬೆಳೆಸುವಂಥ ಕಾರ್ಯ